INDIAN JOURNAL OF HISTORY AND ARCHAEOLOGY
ISSN (e):2582-225X
Vol-4, Issue -4, November-December, 2022,
Page No,27- 35
Peer Reviewed Journal, Referred Journal

# ಕೃಷ್ಣರಾಜನಗರ ತಾಲೋಕಿನ ಶೈವ ದೇವಾಲಯಗಳ ನಿರ್ಮಾಣ ಕುರಿತ ಒಂದು ಅವಲೋಕನ

ಡಾ.ನೀಲಕಂಠಸ್ವಾಮಿ.[1]

ಕರ್ನಾಟಕವು ತನ್ನ ಧಾರ್ಮಿಕ ಜೀವನದ ಎಲ್ಲ ಮುಖಗಳಲ್ಲಿಯೂ ವಿವಿಧ ಧರ್ಮವನ್ನು ಅಳವಡಿಸಿಕೊಂಡಿತು. ವೇದಕಾಲಕ್ಕಿಂತ ಪ್ರಾಚೀನವಾದ **'ನಾಗಧರ್ಮ'**ದಿಂದ ಹಿಡಿದು ಕಾಲಕಾಲಕ್ಕೆ ಬಂದ ಎಲ್ಲಾ ಧರ್ಮಗಳೂ ಇಲ್ಲಿ ಆಶ್ರಯ ಪಡೆದವು. ಆದ್ದರಿಂದ ಕರ್ನಾಟಕ ಧರ್ಮ ಸಮನ್ವಯದ ಆದರ್ಶಕ್ಕೆ ಸಮೃದ್ಧವಾದ ರಂಗಭೂಮಿಯಾಗಿ ಪರಿಣಮಿಸಿತು. ಕರ್ನಾಟಕದ ಧಾರ್ಮಿಕ ಸಮನ್ವಯತೆಯನ್ನು ಪ್ರಾಚೀನ ಕಾಲದಿಂದಲೂ ಅನೇಕ ಧರ್ಮಗಳನ್ನು ಪ್ರೋತ್ಸಾಹಿಸಿ ಬೆಳೆಸಿಕೊಂಡು ಬಂದಿದೆ ಎಂಬುದನ್ನು ಗುರುತಿಸಬಹುದು. ಆದ್ದರಿಂದಲೇ, ಈ ನಾಡಿನಲ್ಲಿ ಬ್ರಾಹ್ಮಣ ಧರ್ಮವು ತನಗೆ ಪ್ರತಿಸ್ಪರ್ಧಿಯಾದ ಸಶಕ್ತ ಧಾರ್ಮಿಕ ಪಂಥಗಳೇ ಆಗಿರುವಂತಹ ವೈಷ್ಣವ, ಜೈನ, ಶೈವ ಮತ್ತು ಬೌದ್ಧಧಮ್ಮಗಳನ್ನು ತನ್ನೊಳಗೆ ಸೇರಿಸಿಕೊಳ್ಳುವದರ ಮೂಲಕ ತನ್ನದೇ ಆದಂತಹ ಧಾರ್ಮಿಕತೆಯ ಔದಾರ್ಯವನ್ನು ತೋರುತ್ತಲೇ ಬಂದಿರುತ್ತದೆ.

ಶೈವ ಮತವು ಬಹು ಪ್ರಾಚೀನವಾದುದು ಎಂಬುದಕ್ಕೆ ಹರಪ್ಪಾ ಮತ್ತು ಮೊಹೆಂಜೋದಾರೋಗಳ ನಾಗರೀಕತೆಗಳು ಅವಶೇಷಗಳಲ್ಲಿ**'ಪಶುಪತಿ'** ಹಾಗೂ ಶಿವಲಿಂಗಗಳ ಮೂರ್ತಿಗಳು ಸಿಕ್ಕಿದುದೇ ಸಾಕ್ಷವಾಗಿದೆ. ಹಾಗೆಯೇ ಭಾರತದಲ್ಲಿನ ಪ್ರಾಚೀನ ಕ್ಷೇತ್ರಗಳಾದಂತಹ;ಕಾಶಿ, ಕೇದಾರ, ಶ್ರೀಶೈಲ, ರಾಮೇಶ್ವರ, ಗೋಕರ್ಣದಂತಹ ಶೈವ ಕ್ಷೇತ್ರಗಳೂ ಶೈವ ಮತದ ಪ್ರಾಚೀನತೆಯನ್ನು ಹೆಚ್ಚಿನ ರೀತಿಯಲ್ಲಿಯೇ ಸಾರುತ್ತವೆ ಎನ್ನಬಹುದು.ಈ ಶೈವ ಮತದಲ್ಲಿ ಪ್ರತಿಪಾದಿತವಾಗಿರುವ ತತ್ವಗಳು ವೇದಗಳು ಮತ್ತು ಉಪನಿಷತ್ತುಗಳನ್ನೇ ಆಧರಿಸಿ ಇವೆಯಾದರೂ, ಅವುಗಳು ನೇರವಾಗಿಯೇ ಈ ಮತದ ಆಧಾರವೇ ಆಗಿರುವುದಿಲ್ಲ. ಆದ್ದರಿಂದಲೇ, ಶೈವ ಮತಕ್ಕೆ ಅಥವಾ ಪಂಥಕ್ಕೆ ಸಂಬಂಧಿಸಿದಂತೆಯೇ ಆಧಾರ ಗ್ರಂಥಗಳು ಹಲವು ಹತ್ತು ಇರುತ್ತವೆ. ಅವುಗಳಲ್ಲಿ ಬಹುಮುಖ್ಯವಾಗಿ ಮುಖ್ಯವಾದವುಗಳನ್ನು ಈ ಮುಂದಿನಂತೆ ದಾಖಲಿಸಲಾಗಿದೆ. ಅವುಗಳೆಂದರೆ;

**1.ಸಹಪ್ರಾಧ್ಯಾಪಕರು,ಇತಿಹಾಸ ವಿಭಾಗ,ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬನ್ನೂರು.**

1. ಇಪ್ಪತ್ತೆಂಟು ಶೈವಾಗಮಗಳು
2. ಪೆರಿಯಪುರಾಣ
3. ತಿರುಮುರೈ
4. ತಮಿಳು ಭಾಷೆಯ ತಿರುವಾಚಕಮ್ ಮತ್ತು ತೇವಾರಾಮ್
5. ಶಿವಜ್ಞಾನ ಬೋದಮ್
6. ಶಿವಜ್ಞಾನ ಸಿದ್ದಿಯಾರ್
7. ಉಮಾಪತಿ ಉಪದೇಶಾತ್ಮಕ ಗ್ರಂಥಗಳು
8. ಕಾಶ್ಮೀರದ ಶೈವಗ್ರಂಥಗಳು.

ಮಾನವ ಕುಲದ ಉಗಮದಿಂದ ಒಂದಲ್ಲ ಒಂದು ಬಗೆಯ ನಂಬಿಕೆಗಳ ಜೊತೆಯಲ್ಲೇ ಬೆಳೆದು ಬಂದ ಮಾನವನು ವಸ್ತು ಪೂಜೆ, ಸರ್ವಾತ್ಮವಾದ, ಮಾಟ, ಮಂತ್ರ, ತಂತ್ರ ಹಿರಿಯರ ಪೂಜೆ, ಕುಲದೇವತಾ ಪೂಜೆ,ಹೀಗೆ ಅನೇಕ ಘಟ್ಟಗಳನ್ನು ದಾಟಿ ಬಂದಿದ್ದಾನೆ. ಇಂದು ಧರ್ಮದ ಒಳಹುಳುಕನ್ನು ಬಿಟ್ಟು ಹೊರಗಿನ ಸಿಪ್ಪೆಯನ್ನೇ,ಜಾತಿಯನ್ನೇ ಬಲವಾಗಿ ಹಿಡಿದುಕೊಂಡು ಅನಾಗರೀಕನಂತೆ ವರ್ತಿಸುತ್ತಿದ್ದಾನೆ.ಇದರಿಂದ ಅನೇಕ ಅನಾಹುತಗಳಾಗುತ್ತವೆ. ಮನುಷ್ಯನ ಬದುಕು ಸಾರ್ಥಕವಾಗಬೇಕಾದರೆ; ನೀತಿ ನಿಯಮಗಳಿಂದ ಕೂಡಿರಬೇಕಾದುದು ಅಗತ್ಯವಾಗಿದೆ. ಲೌಕಿಕ ಕಾನೂನು ಕಟ್ಟಳೆಗಳು ಮನಷ್ಯನ ಬಹಿರಂಗದ ಬದುಕನ್ನು ನಿಯಂತ್ರಿಸಿದರೆ; ಧರ್ಮ ಆತನ ಅಂತರಂಗದ ಬದುಕನ್ನು ಹಸನುಗೊಳಿಸುತ್ತದೆ. ಆದ್ದರಿಂದಲೇ, ಸಂಕುಚಿತ ಅವರಣದಿಂದ ಕೂಡಿರುವ ಜಾತಿಮತ ಧರ್ಮಗಳನ್ನು ಬಿಟ್ಟು ವಿಶಾಲ ಮನೋಭಾವದಿಂದ ಬದುಕನ್ನು ಅರ್ಥೈಸಿರುವುದು ಮಾನವೀಯ ಧರ್ಮವೇ ಆಗಿರುತ್ತದೆ ಎನ್ನಬಹುದು. ಅಂತಹ ಮಾನವೀಯ ಮೌಲ್ಯಗಳನ್ನೊಳಗೊಂಡ ಸಿದ್ಧಾಂತವನ್ನು ಹೊಂದಿರುವ ಹಾಗೂ ಆಚರಣೆಯಿಂದ ಪ್ರಜ್ವಲಿಸುತ್ತಿರುವುದು ಶೈವ ಧರ್ಮವೂ ಇಂದಿನ ಮನುಷ್ಯನ ಬದುಕಿಗೆ ಪ್ರಸ್ತುತವಾಗಿದೆ. ಶೈವ ಧರ್ಮದ ತಾತ್ವಿಕ ದರ್ಶನವನ್ನು 'ಶಕ್ತಿ ವಿಶಿಷ್ಟಾದ್ವೈತ' ಎಂದು ಕೂಡ ಕರೆಯಲಾಗಿದೆ.

ಶೈವ ಧರ್ಮದ ಉಗಮ, ವಿಕಾಸ ಮತ್ತು ಪ್ರಾಚೀನತೆಯ ಇತ್ಯಾದಿಗಳ ಬಗೆಗೆ ಯಾವುದೇ ರೀತಿಯ ಒಮ್ಮತವೂ ಕೂಡ ಇಲ್ಲ. ಏಕೆಂದರೆ, ಕಾಯಕ ಯೋಗಿ ಬಸವಣ್ಣ ಅವರ ಹಿಂದೆಯೇ ಅದರ ಅಸ್ತಿತ್ವವಿದೆ ಎಂದು ಗುರುತಿಸಬಹುದು. 12ನೇ ಶತಮಾನದಲ್ಲಿ ಕರ್ನಾಟಕ ರಾಜ್ಯದಲ್ಲಿ ಮೊದಲೇ ಇದ್ದ ವೀರಶೈವ ಧರ್ಮವನ್ನು ಬಸವಣ್ಣ ಅವರು ಪುನರುಜ್ಜೀವನಗೊಳಿಸಿದರು. ಸಂಪ್ರದಾಯದ ಪ್ರಕಾರ; ವಣಾರಾಧ್ಯ, ಮರುಳಾಧ್ಯ, ಎಕೋರಾಮಿತಂದೆ,ಪಂಡಿತಾರಾಧ್ಯ ಮತ್ತು ವಿಶ್ವರಾಧ್ಯ. ಈ ಪಂಚಾಚಾರ್ಯರೇ ವೀರಶೈವ ಮತದ ಸ್ಥಾಪಕರೆಂದು ಕೆಲವು ವಿದ್ವಾಂಸರು ಅಭಿಪ್ರಾಯವನ್ನು ಕೂಡ ಪಡುತ್ತಾರೆ. ಆದರೆ, ಬಸವ ಪುರಾಣದ ಪ್ರಕಾರವಾಗಿಯೇ, ಮೊದಲಾದ ಸಾಹಿತ್ಯ ಕೃತಿಗಳು ನಂದಿಯ ಅವತಾರವಾದ

ಬಸವೇಶ್ವರರೇ ವೀರಶೈವ ಧರ್ಮದ ಸ್ಥಾಪಕರೆಂದು ತಿಳಿಸಿವೆ. ಆದರೆ ವೀರಶೈವ ಧರ್ಮವು ಉಗಮವಾದ ಕಾಲವು ಖಚಿತವಾಗಿ ತಿಳಿಯದು. ಈ ಧರ್ಮವನ್ನು ಶಕ್ತಿ ವಿಶಿಷ್ಟದ್ವೈತ, ಶಿವಾದ್ವೈತ, ಷಷ್ಠಲ, ವೀರಶೈವ ಮೊದಲಾದ ಹೆಸರುಗಳಿಂದ ಕರೆಯುವರು. ಈ ಧರ್ಮದ ಸಿದ್ಧಾಂತಗಳು ಶೈವಾಗಮನಗಳಿಂದಲೂ ಅಲ್ಲಮಪ್ರಭು, ಚೆನ್ನಬಸವಣ್ಣ, ಸಿದ್ಧರಾಮ, ಮಹಾದೇವಿಯಕ್ಕ ಬಸವಣ್ಣ ಅವರಂತಹ ಮಹಾನ್ ಅನುಭಾವಿಗಳ ವಚನಗಳಿಂದಲೂ, ಶಿವಾಗ್ರಯೋಗಿ ಶಿವಾಚಾರ್ಯ, ನೀಲಕಂಠ, ಶಿವಾಚಾರ್ಯ, ಮಗ್ಗೆಯ ಮಾಯಿದೇವ ಮರಿತೋಂಟದಾರ್ಯ ಅಂತವರ ಕೃತಿಗಳಿಂದಲೂ ಕೂಡ ತಿಳುಸುತ್ತವೆ ಎಂದು ಹೇಳಬಹುದು.

ಸರಿಸುಮಾರು ಕ್ರಿ.ಶ. 11ನೇ ಶತಮಾನದಲ್ಲಿ ಅಸ್ಸಾಮಿನ ದೊರೆ ರತ್ನಪಾಲ ಶಿವ ಮತ್ತು ವಿಷ್ಣು ಇಬ್ಬರನ್ನು ಶ್ರದ್ಧೆಯಿಂದಲೇ ಪೂಜಿಸುತ್ತಿದ್ದನು. ಹಾಗೆಯೇ, ಬಂಗಾಳದ ಸೇನಾ ರಾಜ್ಯದ ಸ್ಥಾಪಕನಾದ ವಿಜಯಸೇನ ಶಿವನ ಪರಮ ಭಕ್ತನಾಗಿದ್ದು, ಪರಮ ಮಹೇಶ್ವರನೆಂದೂ ಅರಿವೃಷಭ ಶಂಕರನೆಂದೂ ಬಿರುದುಗಳನ್ನು ಕೂಡ ಹೊಂದು ಮೂಲಕ ಶಿವನ ದೇವಸ್ಥಾನವನ್ನು ನಿರ್ಮಾಣ ಮಾಡಿಸಿದನು. ಅವನ ಮಗ ಬಲ್ಲಾಳಸೇನನು ಶ್ರದ್ಧಾವಂತನಾಗಿ ಶೈವ ಮತಾವಲಂಬಿಯಾಗಿದ್ದನು. ವಾರಾಣಾಸಿ ಮತ್ತು ಕನೂಜಿನ ಗಂಹಡವಾಲ ಅರಸ ಗೋವಿಂದಚಂದ್ರ ಪರಮಮಹೇಶ್ವರನಾಗಿದ್ದನು. ಇವನು ತನ್ನ ಆಡಳಿತದ ಕಾಲದಲ್ಲಿ ಚಿನ್ನ ಮತ್ತು ತಾಮ್ರದ ನಾಣ್ಯಗಳನ್ನು ಮುದ್ರಿಸಿದನು. ಅವುಗಳ ಹಿಂಭಾಗದಲ್ಲಿ ತ್ರಿಶೂಲದ ಚಿನ್ಹೆಯ ಮುದ್ರೆಯನ್ನು ಹಾಕಿಸಿರುವುದು ಕಂಡುಬರುತ್ತದೆ.

ಚಾಲುಕ್ಯ ರಾಜವಂಶದ ಸ್ಥಾಪಕನಾದ ಒಂದನೆಯ ಮೂಲರಾಜ ಶಿವನ ಆರಾಧಕನಾಗಿದ್ದನು. ಅವನ ಉತ್ತರಾಧಿಕಾರಿ ಜಯಸಿಂಹ ಸಿದ್ದರಾಜನು ನಿಷ್ಠವಂತ ಶೈವನಾಗಿದ್ದನು. ಉಜ್ಜಯನಿ ಹಾಗೂ ಧಾರದ ಪಾರಮಾರ ರಾಜವಂಶದ ಒಂದನೇಯ ಭೋಜನೂ ಶೈವ ಮತಾವಲಂಬಿಯೇ ಅಲ್ಲದೆ ಅವನ ಪ್ರತಿಪಾದಕನೂ ಆಗಿದ್ದನು. ಅವನ ತತ್ತ್ವ ಪ್ರಕಾಶ ಎಂಬ ಗ್ರಂಥ ಶೈವಮತಕ್ಕೆ ಸಂಬಂಧಿಸಿದಾಗಿದೆ. ಅವನ ಸಹೋದರ ಉದಯಾದಿತ್ಯನು ಉದಯಪುರದಲ್ಲಿ ನೀಲಕಂಠೇಶ್ವರ ದೇವಾಲಯವನ್ನು ನಿರ್ಮಿಸಿದನು. ತ್ರಿಪುರಿಯ ಕೆಲವು ರಾಜಯ ಶೈವರೆ, ಖುಂದೇಲ್ ಖಂಡದ ಚಂದೇಲರು ಶೈವರಾಗಿದ್ದು, ಪ್ರಬೋಧ ಚಂದ್ರೋಯದವನ್ನು ಬರೆದ ಕೃಷ್ಣಮಿತ್ರನಿಗೆ ಚಂದೇಲ ರಾಜವಂಶದ ಕೀರ್ತಿವರ್ಮ ಆಶ್ರಯ ನೀಡಿದನು ಜೊತೆಗೆ ಮಹೋಬಾದಲ್ಲಿ ಶಿವಾಲಯವನ್ನು ನಿರ್ಮಿಸಿದನು ಎಂಬುದು ಕೂಡ ತಿಳಿದುಬರುತ್ತದೆ.

ಕಲ್ಯಾಣದ ಚಾಲುಕ್ಯರು ಶೈವರಾಗಿದ್ದು, ಸರಿಸುಮಾರು ಕ್ರಿ.ಶ.1043 ರಿಂದ 1068ರವರೆಗೆ ಅಧಿಕಾರದಲ್ಲಿದ್ದ ಒಂದನೇಯ ಸೋಮೇಶ್ವರ ನಿಷ್ಠವಂತ ಶೈವನಾಗಿದ್ದನು. ಅವನ ಮಗನಾದ ಸೋಮೇಶ್ವರ ಕ್ರಿ.ಶ.1068 ರಿಂದ 1078ರವರೆಗೆ ಅಧಿಕಾರದಲ್ಲಿದ್ದ ಶೈವ ಧರ್ಮವನ್ನು ಹೆಚ್ಚಿನದಾಗಿಯೇ ಪ್ರೋತ್ಸಾಹಿಸಿದನು. ಇವನ ಉತ್ತರಾಧಿಕಾರಿಯಾಗಿದ್ದ 6ನೇ ವಿಕ್ರಮಾಧಿತ್ಯ ಕ್ರಿ.ಶ.1076 ರಿಂದ 1126ರವರೆಗೆ

ಅಧಿಕಾರದಲ್ಲಿದ್ದು ಮೊದಲು ಜೈನನಾಗಿದ್ದು, ಅನಂತರ ಕಟ್ಟಾ ಶೈವನಾದನು. ಪೂರ್ವ ಚಾಲುಕ್ಯರು, ಪೂರ್ವಗಂಗರೂ ಮತ್ತು ಕಾಕತೀಯರು ಇವರೆಲ್ಲರು ಶೈವರಾಗಿದ್ದು, ವೀರಶೈವ ಪುನರುತ್ಥಾನದಿಂದ ಹೆಚ್ಚಾಗಿ ಪ್ರಭಾವಿತರಾದವರು. ದ್ವಾರಸಮುದ್ರದ ಹೊಯ್ಸಳರ ಆಶ್ರಯದಲ್ಲಿ ಅನೇಕ ಮಂದಿ ವೀರಶೈವ ವಿದ್ವಾಂಸರಿದ್ದರು. ಚೋಳ ರಾಜರು ಶೈವ ಧರ್ಮದ ಪ್ರಧಾನ ಆಶ್ರಯದಾತನಾಗಿದ್ದನು. ಒಂದನೇ ವೀರರಾಜೇಂದ್ರನು ಸರಿಸುಮಾರು ಕ್ರಿ.ಶ. 1063 ರಿಂದ 1070ರವರೆಗೆ ಚಿದಂಬರದ ನಟರಾಜನಿಗೆ ಒಂದು ಮಾಣಿಕ್ಯವನ್ನು ಸಮರ್ಪಿಸಿದ್ದನು. ಕ್ರಿ.ಶ. 1128ರಲ್ಲಿ ವಿಕ್ರಮ ಚೋಳ ಚಿದಂಬರ ದೇವಸ್ಥಾನಕ್ಕೆ ಹೆಚ್ಚಾಗಿ ದಾನಗಳನ್ನು ನೀಡಿದ್ದನು. ಅವನ ಉತ್ತರಾಧಿಕಾರಿ ಎರಡನೇ ಕಲೋತ್ತುಂಗನು ಕ್ರಿ.ಶ.1133 ರಿಮದ 1150ರವರೆಗೆ ಅದೇ ರೀತಿ ದಾನಗಳನ್ನು ಕೂಡ ಹೆಚ್ಚಿನದಾಗಿಯೇ ನೀಡಿದ್ದನು. 3ನೇ ರಾಜರಾಜ ಚೋಳನು ಸ್ವಾಮಿ ಭಕ್ತ ಸಾಮಂತನಾಗಿ ತನ್ನ ಜೀವನವನ್ನು ಪ್ರಾರಂಭಿಸಿದನು. ತದನಂತರ ತನ್ನ ಸ್ವಾಧೀನತೆಯನ್ನು ಘೋಷಿಸಿದ ಕೋಪ್ಪೆರುಂಜಿಂಗನು ಕ್ರಿ.ಶ.1229 ರಿಂದ 1278ರವರೆಗೂ ಕೂಡ ನಟರಾಜನ ಶ್ರದ್ಧವಂತ ಭಕ್ತನಾಗಿದ್ದನು. ಚೋರಂತೆಯೇ ಪಾಂಡ್ಯರು ಕೂಡ ಶೈವ ಧರ್ಮವನ್ನು ಅನುಸರಿಸುತ್ತಲೇ ಬಂದರು. ಒಂದನೇಯ ಜಟಾವರ್ಮ ಸುಂದರ ಪಾಂಡ್ಯನು ಕ್ರಿ.ಶ.1251 ರಿಂದ 1268ರವರೆಗೆ ಚಿದಂಬರ ದೇವಸ್ಥಾನದ ಮೇಲ್ಛಾವಣೆಗೆ ಚಿನ್ನದ ಹೊದಿಕೆಯನ್ನು ಮಾಡಿಸುವುದರ ಮೂಲಕ ನಟರಾಜನಿಗೆ ತನ್ನ ಭಕ್ತಿಯನ್ನು ತೋರಿಸಿದನು. ಸರಿಸುಮಾರು ಕ್ರಿ.ಶ.10 ರಿಂದ 12ನೇ ಶತಮಾನದಿಂದ ಶೈವ ಧರ್ಮವು ಅಸಾಮಾನ್ಯ ಪ್ರಗತಿಯನ್ನು ಕಂಡಿತು ಎಂದೇ ಹೇಳಬಹುದು. ಈ ಅವಧಿಯಲ್ಲಿ ಕಾಳಮುಖಯತಿಗಳ ಪ್ರಭಾವದಿಂದ ಕರ್ನಾಟಕದಲ್ಲಿ ಸಾವಿರಾರು ಶಿವಾಲಯಗಳು ನಿರ್ಮಾಣವಾದವು. ಅನೇಕ ವಿದ್ವಾಂಸರು ಸಂಸ್ಕೃತದಲ್ಲಿ ಧಾರ್ಮಿಕ ಕೃತಿಗಳನ್ನು ಬರೆಯಲು ತೊಡಗಿದರು. ಕೆಳದಿಯ ವೀರಶೈವ ನಾಯಕರು, ವಿಜಯನಗರದ ಅರಸರು, ಮೈಸೂರಿನ ಒಡೆಯರು ವೀರಶೈವ ಕವಿಗಳನ್ನು ಪೋಷಿಸಿದರು. ಕೃಷ್ಣರಾಜನಗರ ತಾಲೋಕಿನ ಪ್ರದೇಶದಲ್ಲಿ ಶೈವಧರ್ಮವೂ ಸಹ ಪುರಾತನ ಕಾಲದಿಂದಲೂ ಈ ಪದೇಶದಲ್ಲಿ ಪ್ರಮುಖವಾದಂತಹ ಪಾತ್ರವನ್ನು ಪಡೆದುಕೊಂಡಿವೆ ಎಂದು ಹೇಳಬಹುದು.

ವೀರಶೈವ ಧರ್ಮದಲ್ಲಿ **'ಲಿಂಗ'**ವೇ ಸರ್ವಸ್ವವಾಗಿದೆ. ಪರಾತ್ಪರ ವಸ್ತುವನ್ನು ಬಯಲು, ಸ್ಥಲ, ಶೂನ್ಯ, ನಿಷ್ಪಲ, ಲಿಂಗ, ಎಂದು ಕೂಡ ಕರೆಯಲಾಗಿದೆ. ಶರಣರು ಲಿಂಗವು ಅನುಭವಕ್ಕೆ ವೇಧ್ಯವಾಗಿದ್ದು, ಶಬ್ಧಕ್ಕಾತೀತವಾಗಿದೆ. ಆದ್ದರಿಂದ **'ಬಯಲು'** ಎಂದಿದ್ದಾರೆ. ಅದು ಅನಿರ್ವಚನೀಯವೆನಿಸಿದ ಪರಬ್ರಹ್ಮ ತತ್ವವನ್ನು ವರ್ಣಿಸುವ ಉಪನಿಷತ್ತ್ **'ನೀತಿತತ್ವ'**ಕ್ಕೆ ಸರಿಸಮವಾಗಿದೆ. ವೀರಶೈವರು ಯಾವಾಗಲೂ ಶರೀರದ ಮೇಲೆ ಲಿಂಗ ಧರಿಸುವುದರಿಂದ ದೇಹವು ಶುದ್ಧವಾಗುವುದೆಂದೂ, ಶರೀರ ಶುದ್ಧಿಗೆ ಕರ್ಮಾಧಿಗಳ ಅಗತ್ಯವಿಲ್ಲವೆಂದೂ ನಂಬಿದ್ದಾರೆ. ವೀರಶೈವರು ಅಗತ್ಯವಾಗಿ ಆಚರಿಸತಕ್ಕವುಗಳಲ್ಲಿ ಆಚರಣೆಗಳು

ಮುಖ್ಯವಾದವು. ಅವುಗಳೆಂದರೆ; ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ ಮತ್ತು ಮಂತ್ರಗಳು ಪ್ರಮುಖವಾಗಿವೆ ಎಂದು ಹೇಳಬಹುದು. ವೀರಶೈವ ದೀಕ್ಷೆ ಪಡೆದ ಶರಣನು **'ಲಿಂಗಪತಿ ಶರಣಸತಿ'** ತತ್ವವನ್ನು ಅನುಸರಿಸಿ ಏಕನಿಷ್ಠೆಯಿಂದ ಶಿವಪೂಜೆಯಲ್ಲಿ ತೊಡಗುವವನು. ಬಾಹ್ಯಾಚಾರಗಳಿಗೆ ಹೆಚ್ಚು ಮಹತ್ವ ನೀಡದ ವೀರಶೈವ ಧರ್ಮವನ್ನು ಮಾನವ ಪೂಜೆಯನ್ನು, ಗುಪ್ತಭಕ್ತಿಯನ್ನು ಸ್ವ – ಇಚ್ಛೇಯಿಂದಿತು. ಇದಕ್ಕಾಗಿಯೇ ನಿಷ್ಠೆಯಿಂದ ಕಾಯಕವನ್ನು ಮಾಡುತ್ತ ಗುಪ್ತಭಕ್ತಿಯಿಂದ ಶಿವನನ್ನು ಆಚರಿಸುತ್ತಿದ್ದ ವೀರಶೈವರಿಗೆ ತಮ್ಮ ಶೈವನಿಷ್ಠತೆಯ ಭಂಗ ಬಂದರೇ ಹಿಂಸಾವೃತ್ತಿಗಿಳಿದು **'ವೀರ'** ಶೈವರೆನಿಸಿದರು.

ಕೃಷ್ಣರಾಜನಗರ ತಾಲೋಕು ಪ್ರದೇಶದಲ್ಲಿ ತಲಕಾಡಿನ ಗಂಗರು, ಹೊಯ್ಸಳರು, ವಿಜಯನಗರದ ಅರಸರು ಮತ್ತು ಮೈಸೂರು ಒಡೆಯರ ಕಾಲದಲ್ಲಿ ಅನೇಕ ಶೈವ ದೇವಾಲಯಗಳನ್ನು ನಿರ್ಮಿಸಿದರು ಮತ್ತು ಪೋಷಿಸಿದರು. ಇವರ ಕಾಲದಲ್ಲಿ ನಿರ್ಮಾಣವಾದ ನಗರ ಪ್ರದೇಶದ ಅರ್ಕೇಶ್ವರ ದೇವಾಲಯದ, ಮಳಲಿ ಮಲ್ಲೇಶ್ವರ ದೇವಾಲಯ ಮಿರ್ಲೆಯ ಅಮೃತೇಶ್ವರ ದೇವಾಲಯ ಹಾಡ್ಯದ ವೀರಭದ್ರೇಶ್ವರ ದೇವಾಲಯ, ಹೂಸೂರಿನ ರಾಮಲಿಂಗೇಶ್ವರ ದೇವಾಲಯ, ಮಿರ್ಲೆಯ ವಿರೂಪಾಕ್ಷ ದೇವಾಲಯ ಸಾಲಿಗ್ರಾಮದ ಶಂಭುಲಿಂಗೇಶ್ವರ ದೇವಾಲಯ, ಸಾಲಿಗ್ರಾಮದ ಜ್ಯೋತಿರ್ಮಹೇಶ್ವರ ದೇವಾಲಯ ಮೊರಗ್ಡನಹಳ್ಳಿಯ ಬಸವೇಶ್ವರ ದೇವಾಲಯ, ಚಿಕ್ಕಹನಸೋಗೆಯ ಅವಿಮುಕ್ತೇಶ್ವರ ದೇವಾಲಯ ಮತ್ತು ದೊಡ್ಡಕೊಪ್ಪಲಿನ ಕೊಳ್ಳಿಮಲ್ಲೇಶ್ವರ ದೇವಾಲಯಗಳು ಪ್ರಮುಖವಾಗಿದ್ದು, ಇವುಗಳಲ್ಲಿ ಕೆಲವು ದೇವಾಲಯಗಳನ್ನು ಮಾತ್ರ ವಿಶ್ಲೇಷಿಸಲಾಗಿರುತ್ತದೆ.

ಕೃಷ್ಣರಾಜನಗರ ತಾಲೋಕಿನ ಹಳೆಯ ಗ್ರಾಮವಿರುವ ಸ್ಥಳದಲ್ಲಿ ಮೈಸೂರು ಅರಸಿಕೇರೆಯ ರೈಲ್ವೆ ಮಾರ್ಗದ ಪೂರ್ವಭಾಗದಲ್ಲಿ ಅರ್ಕೇಶ್ವರ ದೇವಾಲಯವಿದೆ. ಇದು ಕ್ರಿ.ಶ.11ನೇ ಶತಮಾನದಲ್ಲಿ ಗಂಗರನ್ನು ಸೋಲಿಸಿದ ಚೋಳ ದೊರೆ ರಾಜೇಂದ್ರ ಚೋಳನ ಕಾಲದಲ್ಲಿ ನಿರ್ಮಿಸಿದನು ಎಂದು ಹೇಳಲಾಗುತ್ತದೆ. ಈ ದೇವಾಲಯವೂ ಕೂಡ ಕೃಷ್ಣರಾಜನಗರ ತಾಲೂಕಿನಲ್ಲಿ ಇರುವಂತಹ ಶೈವ ದೇವಾಲಯಗಳಲ್ಲಿಯೇ ಅತ್ಯಂತ ಪ್ರಸಿದ್ಧ ದೇವಾಲಯವಾಗಿದೆ ಎಂದು ಗುರುತಿಸಲಾಗಿದೆ. ಈ ಅರ್ಕೇಶ್ವರ ದೇವಸ್ಥಾನದ ದಕ್ಷಿಣದ ಬಾಗಿಲ ಬಳಿ ಇರುವ ಸುಮಾರು ಕ್ರಿ.ಶ.1391ರ ಅಕ್ಟೋಬರ್ 28ರ ಶಾಸನದಲ್ಲಿ ಶ್ರೀಇಮ್ಮಡಿ ಹರಿಹರ ಮಹಾರಾಯನ ಸುಂಕದ ಅಧಿಕಾರಿ ಕರಿಯಾಣನು ಕಾವೇರಿಯ ತೀರದಲ್ಲಿ ಎತ್ತುಗಳನ್ನು ಹೂಡಿ ನೀರನ್ನು ಎತ್ತುವ ಸಾಧನವನ್ನು ಕಟ್ಟಿಸಿ ಶ್ರೀಅಂಕನಾಥ ದೇವರಿಗೆ ನೀಡಿದ ಬಗೆಗೆ ಉಲ್ಲೇಖವಿದೆ. ಇದೇ ಅರ್ಕೇಶ್ವರ ದೇವಸ್ಥಾನದ ಬೆಳ್ಳಿಯ ಕಳಸದ ಮೇಲೆ 19ನೇ ಶತಮಾನದ ಶಾಸನದಲ್ಲಿ ಅರ್ಕೇಶ್ವರಂಗೆ ತುರುವೆಕೆರೆ ಬಸವರಾಜೇ ಅರಶಿನವರ ಶೇವಾರ್ಥ ಎಂದು ದೇವಾಲಯಕ್ಕೆ ಬೆಳ್ಳಿಯ ಕಳಸ ನೀಡಿದ ಬಗೆಗೂ ಕೂಡ ಉಲ್ಲೇಖವಿದೆ. ಇದೇ ಅರ್ಕೇಶ್ವರ ದೇವಸ್ಥಾನದ ಹಿತ್ತಾಳೆ ದೀಪದ ಕಂಬದ ಮೇಲೆ ಶ್ರೀಅರ್ಕೇಶ್ವರಸ್ವಾಮಿಗೆ

ಅಶ್ವಥನಾರಾಯಣರ ಸೇವಾರ್ಥ ಎಂದು, ಈ ದೇವಾಸ್ಥಾನಕ್ಕೆ ಕೊಡುಗೆ ನೀಡಿದ ಬಗೆಗೆ ಉಲ್ಲೇಖವಿದೆ. ಇದೇ ಕೃಷ್ಣರಾಜನಗರ ಪಟ್ಟಣದಲ್ಲಿರುವ ಚಂದ್ರಮೌಳೇಶ್ವರ ದೇವಸ್ಥಾನದಲ್ಲಿನ ಕಂಬದ ಮೇಲೆ ಕ್ರಿ.ಶ. 1715ನೇ ಮೇ 7ರ ಶಾಸನದಲ್ಲಿ ಕರಣಿಕ ಲಕ್ಷ್ಮೀದೇವನ ಮಗನಾದ ಕರಣಿಕ ಲಿಂಗಣ್ಣ ಅರ್ಕೇಶ್ವರ ದೇವಸ್ಥಾನದ ಅರ್ಕೆಶ್ವರ ತೀರದ ಅಶ್ವಥಮರದ ಬಳಿ 12 ಅಂಕಣದ ಸನ್ನಿಧಾನವನ್ನು ನಿರ್ಮಿಸಿದ ಬಗೆಗೂ ಕೂಡ ಉಲ್ಲೇಖವಿದೆ.

ಮಳಲಿ ಗ್ರಾಮದಲ್ಲಿ ಪ್ರಾಚೀನ ಕಾಲದ ಹೊಯ್ಸಳರ ಕಾಲದಲ್ಲಿ ಮಲ್ಲೇಶ್ವರ ದೇವಾಲಯವನ್ನು ನಿರ್ಮಿಸಲಾಗಿತ್ತು. ಈ ಮಲ್ಲೇಶ್ವರ ದೇವಸ್ಥಾನದ ಗೋಡೆಯ ಮೇಲೆ ಹೊಯ್ಸಳರ ರಾಜ ವಿಷ್ಣುವರ್ಧನನು ಕ್ರಿ.ಶ.1136 – 1137ರಲ್ಲಿ ಮಲ್ಲೇಶ್ವರ ದೇವಸ್ಥಾನಕ್ಕೆ ಮಂಟಪವನ್ನು ನಿರ್ಮಿಸಲು ಆಯ್ತುಚಾರ್ಯರಿಗೆ ಭೂಮಿಯನ್ನು ಖರೀದಿಸಿ ದತ್ತಿ ನೀಡಿದನ್ನು ಉಲ್ಲೇಖಿಸಿದೆ. ಇದೇ ಮಲ್ಲೇಶ್ವರ ದೇವಸ್ಥಾನದ ಮುಂದೆ ಬಿದ್ದಿರುವ ಕಲ್ಲಿನಲ್ಲಿ 12ನೇ ಶತಮಾನದ ಶಾಸನ ದೊರೆತಿದ್ದು, ಆ ಶಾಸನದಲ್ಲಿ ಮಳಲಿಯ ಮಹದೇವನಿಗೆ ಭೂದಾನ ನೀಡಿದನ್ನು ಉಲ್ಲೇಖಿಸಿದೆ. ಮಳಲಿ ಗ್ರಾಮದ ಪಶ್ಚಿಮದ ಕಡೆ ನೆಟ್ಟಿರುವ ಕಲ್ಲಿನ ಮೇಲೆ ಕ್ರಿ.ಶ. 1813ರಲ್ಲಿ ಬರೆಸಿರುವ ಶಾಸನದಲ್ಲಿ ಶಿವಭಕ್ತ ರಾಚಯ್ಯ ಅವರು ಬಸವಲಿಂಗ ದೇವರಿಗೆ ಶಾಂತಪುರವನ್ನು ದತ್ತಿ ನೀಡಿದನ್ನು ಉಲ್ಲೇಖಿಸಿದೆ.

ದೆಗ್ಗನಹಳ್ಳಿಯ ಬಸವೇಶ್ವರ ದೇವಸ್ಥಾನದ ಹಿಂದೆ ನೆಟ್ಟಕಲ್ಲಿನಲ್ಲಿ ಹೊಯ್ಸಳರ ಮುಮ್ಮಡಿ ನರಸಿಂಹನು ಕ್ರಿ.ಶ.1259ನೇ ಜನವರಿ 29 ರಂದು ಬರೆಸಿದ ಶಾಸನದಲ್ಲಿ ದಾನ ಪೂರ್ವಕವಾಗಿ ದೆಗ್ಗನಹಳ್ಳಿ ಗ್ರಾಮವನ್ನು ದಾನ ನೀಡಿದ ಬಗೆಗೆ ಉಲ್ಲೇಖಿಸಿದೆ. ಚಿಕ್ಕಹನಸೋಗೆ ಗ್ರಾಮದ ದೊಡ್ಡಕೆರೆಯ ಮೇಲಿರುವ ಮಲ್ಲಿಕಾರ್ಜುನ ದೇವಾಲಯದ ಮಂಟಪದಲ್ಲಿರುವ ಶಾಸನವನ್ನು ಹೊಯ್ಸಳರ 3ನೇ ಬಲ್ಲಾಳನ ದಳಪತಿಯಾಗಿದ್ದ ಹನಸೋಗೆಯ ಆಳಾನಾಥನು ನಾಗವೇಸರನ ಮಗ ಚೂಡಪ್ಪ ಮತ್ತು ಹಂಪೆ ಒಡೆಯರಿಗೆ ಉಪಯೋಗವಾಗಲಿ ಎಂದು ಕೆರೆಯೊಂದನ್ನು ನಿರ್ಮಿಸಿ ದಾನ ನೀಡಿದ ವಿಷಯವನ್ನು ಕ್ರಿ.ಶ. 1347ನೇ ಮಾರ್ಚ್ 8ರಲ್ಲಿ ಬರೆಸಿದ ಶಾಸನ ಉಲ್ಲೇಖಿಸಿದೆ.

ಮಿರ್ಲೆ ಗ್ರಾಮದಲ್ಲಿರುವ ಅಮೃತೇಶ್ವರ ದೇವಾಲಯವು ಮತ್ತು ಯೋಗನರಸಿಂಹ ದೇವಾಲಯಗಳು ಎರಡು ಒಂದೇ ಅವಧಿಯಲ್ಲಿ ನಿರ್ಮಾಣವಾಗಿದೆ ಎಂದು ಹೇಳಲಾಗುತ್ತದೆ. ನವರಂಗದ ಲಾಲಟಬಿಂಬದಲ್ಲಿ ನಂದಿಯ ಉಬ್ಬು ಶಿಲ್ಪವಿದೆ. ನವರಂಗ ಒಳ ಅಂಕಣದಲ್ಲಿ ನಾಲ್ಕು ಹೊಯ್ಸಳ ಶೈಲಿಯ ಕಂಬಗಳಿವೆ. ಈ ಅಮೃತೇಶ್ವರ ದೇವಾಲಯದ ಒಳಗೆ ತೊಲೆಯ ಮೇಲಿರುವ ಶಾಸನವು 17ನೇ ಶತಮಾನದ ಮೈಸೂರು ಒಡೆಯರ ಕಾಲದ ಶಾಸನವಾಗಿದ್ದು, ಈ ಶಾಸನದಲ್ಲಿ ಮಿರಲೆಯ ಅಮೃತೇಶ್ವರ ದೇವಂಗೆ ಸುರಿಕದ ಹಸಾಡಯ್ಯನವರ ಸೊಸೆ ಬನ್ದಾವಾಲೆಯವರು ಒಂದು ಗದ್ಯಾಣವನ್ನು ದೇವರ ನಂದಾದೀವಿಗೆ ಕೊಟ್ಟ ಬಗೆಗೆ ಉಲ್ಲೇಖವಿದೆ.

ಮೇಲೂರು ಗ್ರಾಮದಲ್ಲಿರುವ ಶಂಭುಲಿಂಗೇಶ್ವರ ದೇವಾಲಯವಿದೆ. ಈ ದೇವಾಲಯ ಹೊಯ್ಸಳರ ಕಾಲದಲ್ಲಿ ನಿರ್ಮಾಣವಾದ ದೇವಾಲಯದ ರೀತಿ ವಾಸ್ತುಶಿಲ್ಪದ ವಿನ್ಯಾಸವನ್ನು ಹೊಂದಿದೆ. ಈ ಶಂಭುಲಿಂಗೇಶ್ವರ ದೇವಸ್ಥಾನದ ಪಶ್ಚಿಮ ದಿಕ್ಕಿನಲ್ಲಿ ಒಂದು ಶಾಸನವಿದೆ. ಈ ಶಾಸನ 17ನೇ ಶತಮಾನವಾಗಿದ್ದು, ಈ ಶಾಸನದಲ್ಲಿ ಶಂಭುಲಿಂಗೇಶ್ವರ ದೇವರ ಪೂಜೆಗೆ ಬೈಚೇನಹಳ್ಳಿ ಮತ್ತು ಸಂಕನಹಳ್ಳಿಯವರಾದ ಬೋರೇಗೌಡ, ಲಿಂಗೇಗೌಡ ಮಾದೇಗೌಡ ಮತ್ತು ಸುನಂದರವರು 10 ವರಹನೀಡಿದ ಬಗೆಗೆ ಉಲ್ಲೇಖವಿದೆ. ಮುದ್ದೇನಹಳ್ಳಿಯ ಬಸವೇಶ್ವರ ದೇವಾಲಯ ಮುಂದೆ ನೆಟ್ಟಿರುವ ಕಲ್ಲಿನ ಮೇಲೆ ಬರೆಸಿರುವ ಶಾಸನವು ಕ್ರಿ.ಶ.17ನೇ ಶಾಸನವಾಗಿದ್ದು, ಈ ಶಾಸನದಲ್ಲಿ ಬಸವೇಶ್ವರ ದೇವರ ಪೂಜೆಯ ಕಾರ್ಯಕ್ಕೆ ಹಣವನ್ನು ದಾನ ನೀಡಿದ ಬಗೆಗೆ ಉಲ್ಲೇಖವಿದೆ.

ಪ್ರಾಚೀನ ಕಾಲದಲ್ಲಿ ಭಾರತೀಯ ಕಾಲಸಂದರ್ಭದಲ್ಲಿರುವ ಶೈವಧರ್ಮಿಯರು ಶಿವನ ಪ್ರತೀಕವಾಗಿ **'ಲಿಂಗ'**ವನ್ನು ಪೂಜಿಸುತ್ತಾರೆ. ಲಿಂಗವೆಂಬ ಶಬ್ಧಕ್ಕೆ **'ಚಿಹ್ನೆ' 'ಸಂಕೇತ' 'ಲಾಂಭನ'**ವೆಂಬ ಅರ್ಥವಿದೆ. ಲಿಂಗಗಳು ವೈಯಕ್ತಿಕ ಪೂಜೆಗಾಗಿ, ತತ್ಕಾಲಕ್ಕೆ ಸೀಮಿತವಾಗಿ ರೂಪಿಸಿ ಲಿಂಗಗಳಾಗಿವೆ. ಕ್ಷಿಪ್ರ ಪೂಜೆಯಿಂದ ಕ್ಷಿಪ್ರ ಸಿದ್ಧಿಯಾಗುವುದೆಂಬ ನಂಬಿಕೆಯು ಇದೆ. ವಿಶೇಷವಾಗಿ ಪ್ರಕೃತಿ ಸಹಜವಾದ ನಾನಾ ರೂಪಕ ವಸ್ತುಗಳಿಂದ ಲಿಂಗಗಳನ್ನು ನಿರ್ಮಿಸುತ್ತಾರೆ. ಅವುಗಳೆಂದರೆ;

1. **ಮೃಣ್ಮಯ ಲಿಂಗ** – ಹಸಿರು ಜೇಡಿಮಣ್ಣಿನಿಂದ/ನದೀತೀರದ ಮರಳಿನಿಂದ ಲಿಂಗವನ್ನು ಮಾಡಿ ಪೂಜಿಸುತ್ತಾರೆ. ಈ ಮಣ್ಣಿನ ಲಿಂಗವನ್ನು ಪೂಜಿಸುವುದರಿಂದ ಶತ್ರುನಾಶವಾಗುತ್ತಾನೆ ಎಂಬ ನಂಬಿಕೆ ಇದೆ.
2. **ಲೋಹಜ ಲಿಂಗ** – ಚಿನ್ನ, ಬೆಳ್ಳಿ, ತಾಮ್ರ ಪಂಚಲೋಹ, ಸೀಸ, ತಗಡು ಮುಂತಾದ ಲೋಹಗಳಿಂದ ಚಿಕ್ಕ ಪ್ರಮಾಣದ **'ಲಿಂಗ'**ಗಳನ್ನು ಮಾಡುತ್ತಿದ್ದರು. ಸಾಮಾನ್ಯವಾಗಿ ಇವುಗಳನ್ನು ಮನೆಗಳಲ್ಲಿ ಇಟ್ಟು ಪೂಜಿಸುತ್ತಾರೆ.
3. **ರತ್ನಜ ಲಿಂಗ** – ಮುತ್ತು, ಹವಳ, ಶಂಖ, ವೈಢೂರ್ಯ, ಪಂಚರಂಗ, ಪಚ್ಚೆ ಮತ್ತು ನೀಲ ಮಣಿಗಳಿಂದ ನಿರ್ಮಿಸಿದ ಲಿಂಗವನ್ನು **'ರತ್ನಜಲಿಂಗ'**ವೆನ್ನುವರು. ನಂಜನಗೂಡಿನ ನಂಜುಂಡೇಶ್ವರ ದೇವಾಲಯದ ಪರಿವಾರಾಲಯದ ಗುಡಿಯೊಂದರಲ್ಲಿ ಟಿಪ್ಪುಸುಲ್ತಾನನು ನೀಡಿರುವ 'ಪಚೆಲ್ಡಿಂಗ' ಇದೆ.
4. **ಶೈಲಜ ಲಿಂಗ** – ಕಲ್ಲಿನಿಂದ ಮಾಡಿದ ಚಿಕ್ಕ ಚಿಕ್ಕ ಲಿಂಗಗಳನ್ನು ಶೈಲಜಲಿಂಗ ಗಳೆಯ ಕರೆಯುವರು. ಇದನ್ನು ಜಂಗಮರು, ಲಿಂಗಾಯತರು ತಮ್ಮ ದೇಹದ ಮೇಲೆ ಧರಿಸುತ್ತಾರೆ.
5. **ದಾರುಜ ಲಿಂಗ** – ಶಮಿ, ಮಧೂಕ, ಕರ್ಣಿಕಾರ, ಮಂಡೂಕ, ಅರ್ಜುನ, ಪಿಪ್ಪಲ, ಔದುಂಬರ ಮುಂತಾದ ಮರಗಳಿಂದ ಮಾಡಿದ ಲಿಂಗಗಳನ್ನು ದಾರುಜ ಲಿಂಗವೆಂದು ಕರೆಯುತ್ತಾರೆ.

ಇವುಗಳ ಜೊತೆಗೆ ಯಾವ ಮರದ ಕೊಂಬೆ ಕಡಿದಾಗ ಹಾಲು ಬರುತ್ತದೋ ಆ ಎಲ್ಲ ಮರಗಳೂ ಲಿಂಗವನ್ನು ಮಾಡಲು ಶೈವಪಂಥವೆಂದು ತಿಳಿಯಬರುತ್ತದೆ.

6. **ಕ್ಷಣಿಕ ಲಿಂಗ –** ಮರಳು ಅಕ್ಕಿ, ಅನ್ನ ಗಂಧ, ರುದ್ರಾಕ್ಷಿ, ಬೆಣ್ಣೆ, ಹುಲ್ಲು, ಸಗಣಿ, ಹಿಟ್ಟು ಮತ್ತು ಹೂವಿನಿಂದ **'ಲಿಂಗ'**ವನ್ನು ರೂಪಿಸಿ ಪೂಜೆ ಮಾಡಿ, ಪೂಜೆ ಆದ ಕೂಡಲೇ ವಿಸರ್ಜಿಸುವುದು ಉಂಟು. ಇಂತಹ ಲಿಂಗಗಳನ್ನು ಕ್ಷಣಿಕ ಲಿಂಗಗಳೆಂದು ಕರೆಯುತ್ತಾರೆ. ಇಂತಹ ಲಿಂಗಗಳನ್ನು ವಾಮಚಾರಿಗಳು ರಚಿಸಿ ಪೂಜಿಸುವರು ಎಂದೂ ಕೂಡ ಹೇಳಬಹುದು.

ಈ ಮೇಲಿನ ಲಿಂಗಗಳನ್ನು ಚಲಲಿಂಗಗಳೆಂದು ಕರೆಯುತ್ತಾರೆ. ದೇವಾಲಯದ ಗರ್ಭಗೃಹದಲ್ಲಿ ಪೂಜಿಸುವ ಚಲಿಸಲಾಗದ ಲಿಂಗಗಳನ್ನು ಸ್ಥಿರಲಿಂಗಗಳೆಂದು ಕರೆಯುತ್ತಾರೆ. । **ಗಿರೀಶಂ ಗಣೇಶಂ ಗಲೇ ನೀಲವರ್ಣಂ । ಗವೇಂದ್ರಾಧಿರೂಢಂ ಗುಣತೀತರೂಪಂ । ಭವಂ ಭಾಸ್ಕರಂ ಭಸ್ಮನಾ ಭೂಷಿತಾಂಗಂ । ಭವಾನೀಕಲತ್ರಂ ಭಜೇ ಪಂಚವಕ್ತ್ರಂ ॥ ಶಿವಾಕಾಂತ ಶಂಭೋ ಶಶಾಂಕಾರ್ಥಮೌಲೇ । ಮಹೇಶಾನ ಶೂಲಿನ್ ಜಟಾಜೂಟಧಾರಿನ್ । ತ್ವಯೇಕೋ ಜಗದ್ವ್ಯಾಪಕೋ ವಿಶ್ವರೂಪಃ । ಪ್ರಸೀದ ಪ್ರಭೋ ಪೂರ್ಣರೂಪ** ॥ ಲಿಂಗ ಪೂಜೆಯ ಪ್ರಬಲವಾದಂತೆ ಅದರ ಜೊತೆಯಲ್ಲಿಯೋ ಶಿವನ ಮನರಂಜನೆಯ ಪ್ರತಿಮೆಗಳ ಪೂಜೆಯ ಸಾಗಿ ಬಂದಿತು. ಆರಂಭ ಕಾಲದಲ್ಲಿ ಶಿವಪಾರ್ವತಿಯರೇ ಲಿಂಗವನ್ನು ಪೂಜಿಸುವ ಶಿಲ್ಪಗಳಿವೆ. ಎಲ್ಲಾ ಶಿವಾಲಯಗಳಲ್ಲೂ ಗರ್ಭಗೃಹದಲ್ಲಿ ಲಿಂಗವನ್ನು ಪರಿಚಯಿಸಿದರೂ, ಚಲಬೇರಗಳಾಗಿ ಶಿವನಮೂರ್ತಿಗಳೇ ಇರುತ್ತಿದ್ದವು. ಕೆಲವು ವಿಶಇಂಷಂ ಸಂದರ್ಭಗಳಲ್ಲಿ ಶಿವನು ತಾಳಿದ ರೂಪವನ್ನು **'ಶಿವನ ಲೀಲಾಮೂರ್ತಿ'**ಗಳೆನ್ನುವರು. ಶೈವ ಸಿದ್ಧಾಂತವು ಮಹೇಶತತ್ವದ ವಿಭಿನ್ನ ರೂಪಗಳಾದ ಲೀಲಾಮೂರ್ತಿಗಳು 'ಕರ್ಮಸಾದ'ದ ಅಭಿವ್ಯಕ್ತಿಗಳಾಗಿವೆ ಎಂದು ತಿಳಿಸುತ್ತದೆ. ಶಿವನ ಸೃಷ್ಠಿ, ಸ್ಥಿತಿ, ತಿರೋಧಾನ, ಅನುಗ್ರಹ ಮತ್ತು ಸಂಹಾರ ಕ್ರಿಯೆಗಳನ್ನು ಸೂಚಿಸುವ ಈ ಲೀಲಾಮೂರ್ತಿಗಳು ನಿಶ್ಚಿತ ರೂಪವನ್ನು ಹೊಂದಿದ್ದು ಸಕಲವೆನ್ನಿಸಿವೆ ಎಂದು ಹೇಳಬಹುದು.

ಶಿವ ಅಂತಿಮ ಸತ್ಯ ಎಲ್ಲಾ ಪ್ರಾಣಿಗಳಿಗೂ ಸತಿ, ಶಿವನ ಸ್ವಭಾವ ಮಾನವನ ಬುದ್ಧಿಗೆ ಗೋಚರವಾಗದಿದ್ದರೂ ಅವನ ಮಹಾನತೆಯನ್ನು ತಿಳಿಯಲು ಪ್ರಯತ್ನಿಸುತ್ತದೆ. ಶಿವನು ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು, ರುದ್ರರಿಗಿಂತಲೂ ಶಿವನನ್ನು ಸಂಹಾರದ ಕರ್ತೃವಾಗಿಯೇ ಅವನನ್ನು ಗುರುತಿಸಿದಾಗಲೂ ಅವನು ಬೇರೆ ಇಬ್ಬರಿಗಿಂತ ಪರನೆಂದು ನೋಡಬಹುದು. ಪ್ರಳಯದಿಂದ ಬ್ರಹ್ಮ ಮತ್ತು ವಿಷ್ಣುವು ಒಂದು ವಿಧವಾಗಿ ಚ್ಯುತಿಗೊಳ್ಳುತ್ತಾರೆ. ಶಿವನು ಮಾತ್ರ ಚ್ಯುತಿಗೊಳ್ಳದೆ ಪರತತ್ವವಾಗಿ ಶಾಶ್ವತವಾಗಿರುತ್ತಾನೆ. ಶಿವನಿಗೆ ಎಂಟು ಲಕ್ಷಣಗಳು ಇವೆ. ಸ್ವತಂತ್ರತೆ. ಶುದ್ಧತೆ, ಆತ್ಮಜ್ಞಾನ, ಅಮರತೆ, ಮಲಹೀನತೆ, ಅಪರಿಮಿತ, ದಾತೃತ್ವ, ಸರ್ವಜ್ಞತೆ ಮತ್ತು ಆನಂತ ಪರಮಾತ್ಮನನ್ನು **'ಏಣ್‌ಗುಣಟ್ಟಾನ್'** ಅಂದರೆ ಎಂಟು ಗುಣಗಳುಳ್ಳವರು ಎಂದು **'ಕರಳ್'** ಲೇಖಕ ಬಣ್ಣಿಸುತ್ತಾನೆ.

ಹೀಗೆ, ಕೃಷ್ಣರಾಜನಗರ ತಾಲೋಕಿನಲ್ಲಿ ಶೈವ ದೇವಾಲಯಗಳ ನಿರ್ಮಾಣ ಮತ್ತು ಅವುಗಳ ಬಗೆಗೂ ಕೂಡ ಸ್ಥೂಲವಾಗಿಯೇ ದಾಖಲಿಸಲಾಗಿದೆ. ಮತ್ತೇ ಈ ವಿಷಯಕ್ಕೆ ಪೂರಕವಾಗಿ ಶಾಸನ ಆಧಾರಗಳು ಮತ್ತು ಸಾಹಿತ್ಯಿಕ ಆಧಾರಗಳನ್ನು ಆಧರಿಸಿಯೇ ಈ ಲೇಖನವನ್ನು ರಚಿಸಲಾಗಿದೆ ಎಂದು ಹೇಳಬಹುದು. ಹಾಗೆಯೇ, ಭಾರತೀಯ ಮತ್ತು ಕರ್ನಾಟಕ ರಾಜ್ಯದ ಧಾರ್ಮಿಕ ಮತ್ತು ಆಧ್ಯಾತ್ಮಿಕ ಸಂದರ್ಭದಲ್ಲಿ ಎರಡು ಪರಂಪರೆಗಳು ಹೆಚ್ಚು ಪ್ರಚಲಿತವಾಗಿರುತ್ತವೆ. ಅವುಗಳಲ್ಲಿ ಒಂದನೆಯದು ವೈಷ್ಣವ, ಮತ್ತೊಂದು ಶೈವ ಪರಂಪರೆಯೇ ಆಗಿರುತ್ತವೆ. ಈ ವೈಷ್ನವ ಪಂಥದವರನ್ನು ವೈದಿಕರು ಮತ್ತು ಶೈವ ಪಂಥದವರನ್ನು ಅವೈದಿಕರು ಎಂದೂ ಕೂಡ ಕರೆಯಲಾಗುತ್ತದೆ. ಮತ್ತೇ ಅದೇ ಮಾದರಿಯಲ್ಲಿ ಗುರುತಿಸಲಾಗಿದೆ ಎಂದು ಹೇಳಬಹುದು. ಈ ಮಾದರಿಯೂ ಪ್ರಸ್ತುತ ಅಧ್ಯಯನದಲ್ಲಿ ಶೈವ ದೇವಾಲಯದ ನಿರ್ಮಾಣದ ಬಗೆಗಳನ್ನೂ ಕೂಡ ಉಲ್ಲೇಖಿತಗೊಂಡಿರುತ್ತದೆ ಎಂದೇ ಹೇಳಬಹುದು.

## ಪರಾಮರ್ಶನ ಗ್ರಂಥಗಳು


1. ಡಾ.ಎಚ್.ತಿಪ್ಪೇರುದ್ರಸ್ವಾಮಿ, ಕರ್ಣಾಟಕ ಸಂಸ್ಕೃತಿ ಸಮೀಕ್ಷೆ, 2016,
2. ಚ.ನ.ಶಂಕರ್‌ರಾವ್, ಭಾರತೀಯ ಸಮಾಜ, 2012
3. ತೇ.ಸಿ.ವಿಶ್ವೇಶ್ವರಯ್ಯ, ಕಲ್ಯಾಣಪಥ, 1997
4. ಡಾ.ಕೆ.ವಸಂತಲಕ್ಷ್ಮಿ, ಕರ್ನಾಟಕದ ಶೈವ ಶಿಲ್ಪಗಳು, 2007
5. ಭಾರತೀಯ ವಿಧ್ಯಾಭವನ, ಭಾರತೀಯ ಜನತೆಯ ಇತಿಹಾಸ ಮತ್ತು ಸಂಸ್ಕೃತಿ, ಸಂಪುಟ – 10, 2000
6. ಪ್ರೊ.ಬಿ. ಷೇಖ್ ಆಲಿ, ಕರ್ನಾಟಕ ಚರಿತ್ರೆ, ಸಂಪುಟ – 2, 2018
7. ಡಾ.ಕೆ.ವಸಂತಲಕ್ಷ್ಮಿ, ಕರ್ನಾಟಕದ ಶೈವ ಶಿಲ್ಪಗಳು, 2007
8. ಎಪಿಗ್ರಾಫಿಯ ಕರ್ನಾಟಿಕ,ಸಂಪುಟ–5, ಶಾಸನ ಸಂಖ್ಯೆ– 1,2,3,5,9,10,11,39,95,82,15,106,8